# ಗೀತಾ ಪದಕ ಗೆಲ್ಲಬಹುದೆ?

‘ಪದಕ ಗೆಲ್ಲಲೇಬೇಕು; ಪದಕ ಸಿಗದಿದ್ದರೆ ರಿಯೋದಿಂದ ವಾಪಸ್ ಬರುವುದಿಲ್ಲ.’ ಹೀಗೆ ಹೇಳಲು ಧೈರ್ಯವಂತೂ ಬೇಕೇ ಬೇಕು. ಒಂದು ದಿಕ್ಕಿನಿಂದ ಈ ಹೇಳಿಕೆ ತಮಾಷೆಯಾಗಿ ಕಂಡರೂ. ಅದಕ್ಕೂ ಮಿಗಿಲಾದ ಆತ್ಮವಿಶ್ವಾಸದ ಎಳೆಯೊಂದು ಈ ಮಾತಿನಲ್ಲಿದೆ! ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವುದು ಖಂಡಿತಾ ಸುಲಭದ ಮಾತಲ್ಲ. ಆದರೆ ಗೆಲ್ಲಲೇಬೇಕು ಎಂಬ ಛಲದಿಂದ ಹುಟ್ಟುವ ಇಂತಹ ಮಾತುಗಳು ಭಾರತದ ಮಟ್ಟಿಗೆ ವಿಶಿಷ್ಟವೇ.

ಈ ಮಾತನ್ನು ಹೇಳಿದಾಕೆ ಗೀತಾ ಫೋಗಟ್. ಹರಿಯಾಣದ ಫ್ರೀಸ್ಟೈಲ್ ಕುಸ್ತಿ ಪಟು. ಒಲಿಂಪಿಕ್ಸ್ ಕುಸ್ತಿಯಲ್ಲಿ ಸ್ಪರ್ಧಿಸಲು ಅರ್ಹತೆ ಪಡೆದುಕೊಂಡ ಭಾರತದ ಮೊತ್ತಮೊದಲ ಮಹಿಳೆ. ರಿಯೋ ಒಲಿಂಪಿಕ್ಸ್‌ಗೆ ಹೊರಟಿರುವ ಭಾರತದ 120 ಜನರ ತಂಡದಲ್ಲಿ ಈಕೆಯೂ ಇದ್ದಾರೆ. 27ರ ಹರೆಯದ ಗೀತಾ (ಬರ್ತ್‌ಡೇ 15/12/1988) 55 ಕೆ.ಜಿ ದೇಹತೂಕದ ವಿಭಾಗದ ಫ್ರೀಸ್ಟೈಲ್ ಕುಸ್ತಿಯಲ್ಲಿ ಭಾರತವನ್ನು ಪ್ರತಿನಿಧಿಸಿದಾಕೆ. 2010ರಲ್ಲಿ ದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ದೇಶಗಳ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಭಾರೀ ಸುದ್ದಿ ಮಾಡಿದಾಕೆ ಈ ಗೀತಾ. ಏಕೆಂದರೆ ಆಗಲೂ ಅದು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಮಹಿಳೆಯೊಬ್ಬಳು ಗೆದ್ದ ಮೊದಲ ಚಿನ್ನವಾಗಿತ್ತು. ಆ ಬಳಿಕ ಕೆನಡಾದಲ್ಲಿ 2012ರಲ್ಲಿ ನಡೆದ ವಿಶ್ವ ರೆಸ್ಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದಾಗಲೂ, ಅದು ಭಾರತೀಯ ಮಹಿಳೆಯೊಬ್ಬಳ ಮೊದಲ ಸಾಧನೆಯಾಗಿತ್ತು. 2013ರಲ್ಲಿ ಕಾಮನ್‌ವೆಲ್ತ್ ಕುಸ್ತಿ ಸ್ಪರ್ಧೆಯಲ್ಲಿ 59 ಕೆಜಿ ವಿಭಾಗದಲ್ಲಿ ಬೆಳ್ಳಿ ಗೆದ್ದ ಗೀತಾ, 2015ರ ಏಷ್ಯನ್ ರೆಸ್ಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಗೆದ್ದರು. ಆದರೆ ಅದೇ ವರ್ಷ ನಡೆದ ವಿಶ್ವ ರೆಸ್ಲಿಂಗ್ ಚಾಂಪಿಯನ್‌ಶಿಪ್‌ನ ಮೊದಲ ಸುತ್ತಿನಲ್ಲೇ ಸೋಲು ಅನುಭವಿಸಿದರು.



ಗೀತಾಗೆ ಒಲಿಂಪಿಕ್ಸ್‌ನಲ್ಲಿ ಪದಕ ಸಿಗಬಹುದೆ? ಈಗಲೇ ಹೇಳುವುದು ಕಷ್ಟ. ಆದರೆ ಗೀತಾ ಈವರೆಗೆ ಹಾದುಬಂದಿರುವ ಕಷ್ಟದ ಹಾದಿಯನ್ನೊಮ್ಮೆ ನೋಡಿದರೆ ಈಕೆಯ ಆತ್ಮವಿಶ್ವಾಸ ಅಖಂಡ ಎನ್ನುವುದಂತೂ ಖಚಿತ. 2014ರಲ್ಲಿ ಮೊಣಕಾಲು ಗಾಯವಾಗಿ, ಕೊನೆಗೆ ಆಪರೇಷನ್‌ಗೆ ಒಳಗಾದ ಗೀತಾ ಸುಮಾರು ಒಂದೂವರೆ ವರ್ಷ ಕುಸ್ತಿಯ ಕಣದಿಂದ ಹೊರಗುಳಿಯಬೇಕಾಯಿತು. ಆದರೆ ಗಾಯವನ್ನು ಮೆಟ್ಟಿ ನಿಂತು 2015ರ ಏಷ್ಯನ್ ರೆಸ್ಲಿಂಗ್‌ನಲ್ಲಿ ಕಂಚು ಗೆದ್ದದ್ದು ಆತ್ಮವಿಶ್ವಾಸದ ಬಲದಿಂದಲೇ.

ಹಾಗೆ ನೋಡಿದರೆ ಗೀತಾ ಕುಸ್ತಿಪಟುವಾದದ್ದೇ ಒಂದು ಸಾಹಸಗಾಥೆ. ಹರಿಯಾಣದ ಒಂದು ಪುಟ್ಟ ಹಳ್ಳಿ ಬಲಾಲಿ. ರಾಷ್ಟ್ರೀಯ ಕುಸ್ತಿ ತಂಡದಲ್ಲಿ ಸ್ಥಾನ ಗಳಿಸಿದ್ದ ಅಪ್ಪ ಮಹಾವೀರ್ ಸಿಂಗ್ ಫೋಗಟ್ ತನ್ನ ನಾಲ್ಕೂ ಹೆಣ್ಣುಮಕ್ಕಳಿಗೆ ಕುಸ್ತಿ ಕಲಿಸಲು ಹೊರಟಾಗ ನಕ್ಕವರೇ ಹೆಚ್ಚು. ಬರೀ ನಕ್ಕರೆ ದೊಡ್ಡ ವಿಷಯವಲ್ಲ. ಆದರೆ ಊರವರು, ಸಂಬಂಧಿಕರು ಸಿಟ್ಟಿಗೆದ್ದು ಕೂಗಾಡಿದರು– ನಾಚಿಕೆಯಾಗಬೇಕು ನಿನಗೆ! ಹೆಣ್ಮಕ್ಕಳಿಗೆ ಕುಸ್ತಿ ಕಲಿಸ್ತಿದೀಯಾ? ನಿನ್ನ ಮಕ್ಕಳಿಗೆ ಗಂಡು ಸಿಕ್ಕಂತೆಯೇ– ಎಂದರು! ಮಹಾವೀರ್ ಸಿಂಗ್ ಅಂಜಲಿಲ್ಲ. ನಾಲ್ವರು ಹೆಣ್ಣುಮಕ್ಕಳಲ್ಲಿ ಗೀತಾ ಮತ್ತು ಆಕೆಯ ತಂಗಿ ಬಬಿತಾ ಕುಮಾರಿ ಕಚ್ಚಿಕೊಂಡರು. ರಾಷ್ಟ್ರೀಯ– ಅಂತರರಾಷ್ಟ್ರೀಯ ಮಟ್ಟದ ಕುಸ್ತಿ ಸ್ಪರ್ಧೆಗಳಲ್ಲಿ ಪದಕಗಳನ್ನು ಗೆದ್ದರು. ‘ಒಮ್ಮೆ ಗೆಲ್ಲಲು ಆರಂಭಿಸಿ, ಆಮೇಲೆ ಟೀಕಿಸುವ ಇದೇ ಜನ ಹೊಗಳುತ್ತಾರೆ’ ಎಂದು ಅಪ್ಪ ಹೇಳಿದ ಮಾತು ಸುಳ್ಳಾಗಲಿಲ್ಲ. ‘ನಮ್ಮ ಗೀತಾ ಒಲಿಂಪಿಕ್ಸ್‌ಗೆ ಕುಸ್ತಿ ಆಡಲು ಹೋಗುತ್ತಿದ್ದಾಳೆ’ ಎಂದು ಅದೇ ಹರಿಯಾಣದ ಜನ ಕೊಂಡಾಡುತ್ತಿದ್ದಾರೆ. ಬಾಲ್ಯವಿವಾಹ, ಖಾಫ್ ಪಂಚಾಯ್ತಿಗಳ ಕಟ್ಟಳೆಗಳಲ್ಲಿ ನಲುಗುತ್ತಿರುವ ರಾಜ್ಯವೊಂದರಲ್ಲಿ ಈ ಅಪ್ಪ– ಮಕ್ಕಳ ಸಾಹಸ ನಿಜಕ್ಕೂ ಅದ್ವಿತೀಯವೇ.

ಬಾಲ್ಯದಲ್ಲಿ ಅಪ್ಪ ಟೀವಿಯಲ್ಲಿ ಕುಸ್ತಿ ಸ್ಪರ್ಧೆಗಳನ್ನು ನೋಡುತ್ತಿದ್ದಾಗ ಗೀತಾ ಕೂಡಾ ಪಕ್ಕದಲ್ಲೇ ಕುಳಿತು ನೋಡುತ್ತಿದ್ದಳು. ಕೊಟ್ಟಿಗೆಯ ಪಕ್ಕದಲ್ಲಿ ಮಾಡಿದ ಮಣ್ಣಿನ ಕಣದಲ್ಲಿ ತರಬೇತಿ. ಅಪ್ಪನೇ ತರಬೇತಿದಾರ. ನಗರದ ಶ್ರೀಮಂತ ಸ್ಪರ್ಧಿಗಳಂತೆ ತರಬೇತಿಗೆ ಯಾವುದೇ ಮ್ಯಾಟ್ ಇರಲಿಲ್ಲ. ಮ್ಯಾಟ್ ಹಾಳಾಗಲಿ, ತರಬೇತಿಯ ಸಮಯದಲ್ಲಿ ಜೊತೆಗೆ ಕುಸ್ತಿ ಹಿಡಿಯಲು ಹೆಣ್ಣುಮಕ್ಕಳೂ ಬರುತ್ತಿರಲಿಲ್ಲ. ತನ್ನ ಸಮವಯಸ್ಸಿನ ಗಂಡುಮಕ್ಕಳ ಜತೆಗೇ ಕುಸ್ತಿ ಹಿಡಿದು ತರಬೇತಿ ಪಡೆದಾಕೆ ಬಾಲಕಿ ಗೀತಾ! ಸಾಲ ಸೋಲ ಮಾಡಿದ ಅಪ್ಪ, ಇಬ್ಬರು ಹೆಣ್ಣಮಕ್ಕಳಿಗೂ ತರಬೇತಿಗೆ ಸಾಕಷ್ಟು ಖರ್ಚು ಮಾಡಿದ. ಕಾಮನ್‌ವೆಲ್ತ್ ಕುಸ್ತಿಯಲ್ಲಿ ಅಕ್ಕ ತಂಗಿ ಚಿನ್ನ ಮತ್ತು ಬೆಳ್ಳಿಯ ಪದಕಗಳನ್ನು ಗೆದ್ದಾಗ ಇಡೀ ಭಾರತವೇ ಇವರತ್ತ ತಿರುಗಿ ನೋಡಿತು. ಅಲ್ಲಿಂದೀಚೆಗೆ ಭಾರತ ಸರ್ಕಾರ ಮತ್ತು ಮಿತ್ತಲ್ ಚಾಂಪಿಯನ್ಸ್ ಟ್ರಸ್ಟ್ ಗೀತಾಳ ತರಬೇತಿಗೆ ಸಾಕಷ್ಟು ನೆರವು ನೀಡಿದೆ.

ಮಹಾವೀರ್ ಸಿಂಗ್‌ನ ಈ ಸಾಹಸ ಇದೀಗ ‘ಡಂಗಲ್’ ಎಂಬ ಹೆಸರಲ್ಲಿ ಹಿಂದಿ ಸಿನಿಮಾ ಕೂಡಾ ಆಗುತ್ತಿದೆ. ಮಹಾವೀರ್ ಪಾತ್ರದಲ್ಲಿ ಬಾಲಿವುಡ್‌ನ ಸೂಪರ್‌ಸ್ಟಾರ್ ಅಮೀರ್‌ಖಾನ್ ನಟಿಸುತ್ತಿದ್ದಾನೆ. ಕುಸ್ತಿಪಟುವಿನಂತೆ ಕಾಣಲೆಂದೇ ಆತ ತನ್ನ ದೇಹತೂಕವನ್ನು ಅಮೀರ್ 95 ಕೆ.ಜಿಗೆ ಏರಿಸಿಕೊಂಡಿದ್ದಾನೆ. ಗೀತಾಳ ಪಾತ್ರದಲ್ಲಿ ಫಾತಿಮಾ ಸನಾ ನಟಿಸುತ್ತಿದ್ದಾಳೆ. ಚಿತ್ರದ ಚಿತ್ರೀಕರಣಕ್ಕೆ ಸ್ವತಃ ಅಪ್ಪ ಮಕ್ಕಳು ಹಾಜರಾಗಿ ಸುದ್ದಿ ಮಾಡಿದ್ದಾರೆ. ಡಿಸೆಂಬರ್ 23ರಂದು ಈ ಸಿನಿಮಾ ತೆರೆ ಕಾಣಲಿದೆ. ಅಷ್ಟರೊಳಗೆ ಗೀತಾ ಒಲಿಂಪಿಕ್ಸ್‌ನಲ್ಲಿ ಪದಕವೊಂದನ್ನು ಗೆದ್ದು ಬಂದರೆ ಅದೂ ಚಿತ್ರಕ್ಕೆ ಬೋನಸ್ ಆಗಬಹುದು.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65